ಕೆಲವೆಡೆ ಪುರುಷರು ಬಳಕೆಯಾಗಿದ್ದುಂಟು. ಜೆರ್ಮಿ ವೂಲ್ಫೆಂಡೆನ್ ಎಂಬಾತ ಬ್ರಿಟಿಷ್ ಪತ್ರಕರ್ತನ ಸೋಗಿನಲ್ಲಿ ಗುಪ್ತ ಮಾಹಿತಿ ರವಾನಿಸುತ್ತಿದ್ದ. ಆತ ಸಲಿಂಗ ಕಾಮದ ಮೂಲಕ ಅಧಿಕಾರಿಯಿಂದ ರಹಸ್ಯ ದಾಖಲೆಗಳನ್ನು ಪಡೆದಿದ್ದ.

ಇಂದಿಗೂ ಪಾಶ್ಚಿಮಾತ್ಯ ರಾಷ್ಟ್ರದವರಿಗೆ ಚೀನಾದ 'ಹನಿ ಟ್ರ್ಯಾಪ್' ಬೇಹುಗಾರಿಕೆ ಕುರಿತು ಭಯವಿದೆಯಂತೆ. ಕೆಲವು ವರ್ಷಗಳ ಹಿಂದೆ 'ಎಂ15' ಸಂಸ್ಥೆಯು 14 ಪುಟಗಳ ಎಚ್ಚರಿಕೆ ಪತ್ರವೊಂದನ್ನು ಬ್ರಿಟಿಷ್ ಬ್ಯಾಂಕುಗಳು, ವ್ಯಾವಹಾರಿಕ ಕೇಂದ್ರಗಳಿಗೆ ಕಳುಹಿಸಿತ್ತು. ಅದರಲ್ಲಿ ಚೀನಾದ ಬೇಹುಗಾರಿಕೆ ಸಂಸ್ಥೆಯು ಮಹತ್ವದ ಮಾಹಿತಿ ಕದಿಯಲು ಲೈಂಗಿಕ ಅಸ್ತ್ರವನ್ನು ಬಳಸುವ ಅಪಾಯದ ಕುರಿತು ಎಚ್ಚರಿಸಿತ್ತು.

ಭಾರತೀಯ ಸೇನೆಗೆ 'ಹನಿ ಟ್ರ್ಯಾಪ್' ದೊಡ್ಡ ಪಿಡುಗಾಗಿ ಪರಿಣಮಿಸಿದ ಪ್ರಸಂಗಗಳು ಕಳೆದ ಕೆಲವು ವರ್ಷಗಳಲ್ಲಿ ಸರಣಿಯಾಗಿ ವರದಿಯಾದವು. ಭಾರತೀಯ ವಾಯುಸೇನೆಯ ಅಧಿಕಾರಿಯೊಬ್ಬರಿಗೆ ದಾಮಿನಿ ಮೆಕ್‌ನಾಟ್ ಎಂಬ ಮಹಿಳೆ ಫೇಸ್‌ಬುಕ್ ಮೂಲಕ ಪರಿಚಯವಾಗಿದ್ದಳು. ಆಕೆಯೊಂದಿಗೆ ಸಖ್ಯ ಬೆಳೆಸಿಕೊಂಡ ಅಧಿಕಾರಿ, ಸೇನೆಯ ಕೆಲವೊಂದು ಕಾರ್ಯಾಚರಣೆಗಳ ಮಾಹಿತಿಯನ್ನು ಹಂಚಿಕೊಂಡಿದ್ದರು. ಒಂದುದಿನ ಆಕೆ ಇದ್ದಕ್ಕಿದ್ದಂತೆ ಮಾಯವಾದಳು. ಇತ್ತ ಮಾಹಿತಿ ಹಂಚಿಕೊಂಡ ಆರೋಪದ ಮೇರೆಗೆ ಅಧಿಕಾರಿ ಬಂಧಿತನಾದ. ತನಿಖೆ ನಂತರ ತಿಳಿದುಬಂದಿದ್ದು, 'ಆಕೆ' ಐಎಸ್‌ಐ ಗೂಢಾಚಾರ ಎನ್ನುವ ವಿಷಯ.

ಕುಟುಂಬದಿಂದ ದೀರ್ಘ ಕಾಲ ದೂರವೇ ಇರುವ ಸೈನಿಕರನ್ನು ಸೆಳೆಯಲು ವಿರೋಧಿಗಳು ಮಹಿಳೆಯರನ್ನು ಮುಂದೆ ಬಿಡುವುದು ರಾಜಮಹಾರಾಜರ ಕಾಲದಿಂದಲೂ ನಡೆದು ಬಂದ ತಂತ್ರ. ಇತ್ತೀಚಿನ ದಿನಗಳಲ್ಲಿ ಇದು ಇನ್ನಷ್ಟು ಸರಳವಾಗಿದೆ. ವರ್ಚುಯಲ್ ದಾರಿಗಳಾದ ವಾಟ್ಸ್‌ಆ್ಯಪ್, ಫೇಸ್‌ಬುಕ್‌ನಂತ ಸಾಮಾಜಿಕ ಜಾಲತಾಣಗಳು ಇವುಗಳಿಗೆ ಮತ್ತಷ್ಟು ಸಾಥ್ ನೀಡಿವೆ. ವಾಟ್ಸ್‌ಆ್ಯಪ್ ಮೂಲಕ ಮಧುರವಾಗಿ ಆರಂಭವಾಗುವ ಸಂಭಾಷಣೆಯಲ್ಲಿ ಜೇನಿಗಿಂತಲೂ ವಿಷವೇ ಹೆಚ್ಚು ಎನ್ನುವುದು ಆ ಕ್ಷಣಕ್ಕೆ ತಿಳಿಯುವುದೇ ಇಲ್ಲ. ಒಂದು ಉದಾಹರಣೆ ನೋಡಿ. ಪಂಜಾಬ್‌ಗೆ ನಿಯೋಜನೆಗೊಂಡಿದ್ದ ಸಿಪಾಯಿಯೊಬ್ಬನ ಮೊಬೈಲ್‌ಗೆ ಒಂದು ದಿನ



ಅಪರಿಚಿತ ಸಂಖ್ಯೆಯಿಂದ ಒಂದು ಸಂದೇಶ ಬಂತು. ಆ ಸಂದೇಶವೇನೂ ಆ ಶಿಸ್ತಿನ ಸಿಪಾಯಿಯನ್ನು ಮರಳುಮಾಡಲಿಲ್ಲ. ವಿನಯಾ ಶರ್ಮಾ ಎಂಬ ಮಹಿಳೆ ತನ್ನನ್ನು ಪುಣೆಯಲ್ಲಿರುವ ಸೇನಾ ಲೇಖಪಾಲ ಕಚೇರಿಯಲ್ಲಿ ಕೆಲಸಮಾಡುವಾಕೆ ಎಂದು ಪರಿಚಯಿಸಿಕೊಂಡಿದ್ದಳು. ಆಕೆ ಸಣ್ಣಗೆ ಒಂದೊಂದೇ ಅಪಾಯವಲ್ಲದ ಪ್ರಶ್ನೆಗಳನ್ನು ಸಿಪಾಯಿಯ ಮುಂದಿಡುತ್ತಾ ಬಂದಳು. 'ಕ್ಯಾಪ್ಟನ್ ಮತ್ತು ಮೇಜರ್ ನಡುವಿನ ವ್ಯತ್ಯಾಸವೇನು?' ಎಂಬ ಪ್ರಶ್ನೆಯೊಂದಿಗೆ ಆಕೆಯ ಸಂಭಾಷಣೆ ಆರಂಭವಾಯಿತು. ಆಕೆಗೆ ಸೇನೆಯ ಕುರಿತು ತಿಳಿವಳಿಕೆ ನೀಡುವ ಉತ್ಸಾಹದಲ್ಲಿ ಸಿಪಾಯಿ ಆಕೆಯ ಪ್ರೇಮಪಾಶಕ್ಕೆ ಸಿಲುಕಿಯೇಬಿಟ್ಟ. ಆಕೆಯ ಪ್ರಶ್ನೆಗಳೂ ಹಾಗೆಯೇ ಮುಂದುವರಿದವು.

ನಿಮ್ಮ ಕಾರ್ಯಾಚರಣೆಯ ರೂಪುರೇಷೆ ನಡೆಸುವ ಕೊಠಡಿ ಹೇಗಿರುತ್ತದೆ? ನಾನೊಮ್ಮೆ ನೋಡಬೇಕಲ್ಲ. ಅದರ ವಿಡಿಯೊ ಕಳುಹಿಸುತ್ತೀಯಾ? ಎಂದು ಆಕೆಯ ವಿನಯದ ಕೋರಿಕೆಗೆ ಈತ ಕರಗಿ ನೀರಾಗಿಬಿಡುತ್ತಿದ್ದ. ಆಕೆಯನ್ನು ಎಂದಿಗೂ ನಿರಾಕರಿಸಲು ಒಪ್ಪದ ಮನಸ್ಸು, ಸೇನೆಯ ಹಲವು ಪ್ರಮುಖ ಮಾಹಿತಿ ಸೋರಿಕೆಗೆ ಕಾರಣವಾಗುತ್ತಾ ಹೋದವು. ನಿಮ್ಮ ಕಾರ್ಯಾಚರಣೆ ಏಕೆ ಮುಂದುವರಿದಿದೆ? ಸೇನೆಯ ನಕ್ಷೆ ಅಂದರೇನು? ಅದು ಹೇಗಿರುತ್ತದೆ? ಅದರ ಚಿತ್ರ ಕಳುಹಿಸು ನನ್ನ ಕುತೂಹಲಕ್ಕಾಗಿ... ಇವುಗಳಿಗೂ ಆತ ಅಷ್ಟೇ ಪ್ರೀತಿಯಿಂದ ಮಾಹಿತಿ ನೀಡಿದ.

ಆಕೆ ಸಿಪಾಯಿಯ ತಾಯಿ ಹಾಗೂ ಸೋದರಿಯನ್ನೂ ಭೇಟಿಯಾದಳು. ಮದುವೆಯಾಗುವ ಇಂಗಿತ ವ್ಯಕ್ತಪಡಿಸಿದಳು. ಸಿಪಾಯಿ ಬಳಿ ಮಾತನಾಡಿ 'ನನ್ನ ದುಡಿಮೆಯಲ್ಲಿ ₹5 ಸಾವಿರ ಕೊಡುತ್ತೇನೆ. ನಮ್ಮ ಭವಿಷ್ಯಕ್ಕಾಗಿ ಅದನ್ನು ಕೂಡಿಡೋಣ' ಎಂದು ಸಿಪಾಯಿಯ ಹೃದಯದಲ್ಲಿ ಮದುವೆಯ ಕನಸು ಬಿತ್ತಿದಳು. ಆತನೋ ಸೇನೆಯ ಮಾಹಿತಿಯನ್ನು ಹಾಗೂ ತನ್ನ ಪ್ರೀತಿಯನ್ನು ಬೊಗಸೆಯಲ್ಲಿ ಮೊಗೆದು ಮೊಗೆದು ನೀಡಿದ. ಆದರೆ ಈ ವೇಗದ ಪ್ರೇಮಕಥೆಯನ್ನು ಸೇನೆಯ ಮತ್ತೊಂದೆಡೆಯಿಂದ ಗಮನಿಸಲಾಗುತ್ತಿತ್ತು. ಜಮ್ಮುವಿನ ಉಧಮಪುರದಲ್ಲಿರುವ ಉತ್ತರ ಕಮಾಂಡ್ ಮುಖ್ಯಕಚೇರಿಯಲ್ಲಿರುವ ಸೇನೆಯ ಗುಪ್ತಚರ ವಿಭಾಗಕ್ಕೆ 'ಹನಿ ಟ್ರ್ಯಾಪ್'ನ ವಾಸನೆ ಬಡಿದಿತ್ತು. ಇದೊಂದೇ ಅಲ್ಲ, ಇಂಥ 20 ಪ್ರಕರಣಗಳು ಒಂದು ವರ್ಷದಲ್ಲಿ ನಡೆದಿರುವ

## ಹನಿ ಟ್ರ್ಯಾಪ್ ತಡೆಗಟ್ಟಲು ಇರುವ ತಂತ್ರಗಳು

- ರಿವರ್ಸ್ ಸೈಕಾಲಜಿ ತಂತ್ರಗಳನ್ನು ಬಳಸಿ ಹನಿ ಟ್ರ್ಯಾಪಿಂಗ್ ಜಾಲವನ್ನು ಭೇದಿಸಲಾಗುತ್ತದೆ. ಸಾಮಾಜಿಕ ಜಾಲತಾಣದಲ್ಲಿ ಬಳಸಿರುವ ಚಿತ್ರಗಳು, ಖಾತೆಯ ಮಾಹಿತಿ ಆಧರಿಸಿ ಪತ್ತೆ ಮಾಡುವ ತಂತ್ರಜ್ಞಾನ ಅಭಿವೃದ್ಧಿಗೊಂಡಿವೆ. ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ಇತ್ತೀಚಿನ ದಿನಗಳಲ್ಲಿ ವ್ಯಾಪಕವಾಗಿ ಬಳಸಲಾಗುತ್ತಿದೆ.
- ಸಾಮಾನ್ಯವಾಗಿ ವಂಚಕರ ಖಾತೆಯ ಪ್ರೊಫೈಲ್ ಚಿತ್ರಗಳು ಹೆಚ್ಚಾಗಿ ಸುಂದರ ಮಹಿಳೆಯದ್ದೇ ಆಗಿರುತ್ತದೆ. ಹೀಗಾಗಿ ಈ ಚಿತ್ರವನ್ನು 'ರಿವರ್ಸ್ ಇಮೇಜ್ ಸರ್ಚ್' ಮೂಲಕ ಅಂತರ್ಜಾಲದಲ್ಲಿ ಪತ್ತೆ ಮಾಡಲಾಗುತ್ತದೆ. ಇದರಿಂದ ಪ್ರೊಫೈಲ್ ನೈಜವೋ ಅಥವಾ ಜಾಲವೋ ಎಂಬುದು ತಿಳಿಯಲಿದೆ.
- ಯಾವುದೇ ಸಂಶಯಾತ್ಮಕ ಖಾತೆಗೆ ಹೆಚ್ಚು ಹಿಂಬಾಲಕರು ಇದ್ದಲ್ಲಿ ಅಂಥ ಖಾತೆಗಳ ಸಾಚಾತನ ಪತ್ತೆ ಮಾಡುವುದು ಸುಲಭ.
- ಸೋಷಿಯಲ್ ಮೀಡಿಯಾದಲ್ಲಿ ಯಾವುದೇ ಖಾತೆಗಿರುವ ಸಂಪರ್ಕಗಳು ಪರಸ್ಪರ ಸಂಪರ್ಕ ಹೊಂದಿರುತ್ತವೆ. ಆದರೆ 'ಹನಿ ಟ್ರ್ಯಾಪ್' ಖಾತೆಗಳಲ್ಲಿರುವ ಸದಸ್ಯರು ಪರಸ್ಪರ ಸಂಪರ್ಕ ಹೊಂದಿರುವುದಿಲ್ಲ ಎಂಬುದನ್ನು ಗಮನಿಸಬೇಕು.